# PAPER-II
# KANNADA

**Signature and Name of Invigilator**

1. (Signature) __________________________
   (Name) ____________________________
2. (Signature) __________________________
   (Name) ____________________________

OMR Sheet No. : ...............................................
(To be filled by the Candidate)

Roll No. | | | | | | | | |
(In figures as per admission card)

Roll No.________________________________
(In words)

**J 2 1 1 2**

Time : **1 1/4** hours] [Maximum Marks : **100**

| Number of Pages in this Booklet : **12** | Number of Questions in this Booklet : **50** |
|---|---|

## Instructions for the Candidates

1. Write your roll number in the space provided on the top of this page.
2. This paper consists of fifty multiple-choice type of questions.
3. At the commencement of examination, the question booklet will be given to you. In the first 5 minutes, you are requested to open the booklet and compulsorily examine it as below :
   (i) To have access to the Question Booklet, tear off the paper seal on the edge of this cover page. Do not accept a booklet without sticker-seal and do not accept an open booklet.
   (ii) **Tally the number of pages and number of questions in the booklet with the information printed on the cover page. Faulty booklets due to pages/questions missing or duplicate or not in serial order or any other discrepancy should be got replaced immediately by a correct booklet from the invigilator within the period of 5 minutes. Afterwards, neither the Question Booklet will be replaced nor any extra time will be given.**
   (iii) After this verification is over, the OMR Sheet Number should be entered on this Test Booklet.
4. Each item has four alternative responses marked (A), (B), (C) and (D). You have to darken the circle as indicated below on the correct response against each item.
   **Example :** (A) (B) ● (D)
   where (C) is the correct response.
5. Your responses to the items are to be indicated in the **OMR Sheet given inside the Paper I Booklet only.** If you mark at any place other than in the circle in the OMR Sheet, it will not be evaluated.
6. Read instructions given inside carefully.
7. Rough Work is to be done in the end of this booklet.
8. If you write your Name, Roll Number, Phone Number or put any mark on any part of the OMR Sheet, except for the space allotted for the relevant entries, which may disclose your identity, or use abusive language or employ any other unfair means, you will render yourself liable to disqualification.
9. You have to return the test question booklet and Original OMR Sheet to the invigilators at the end of the examination compulsorily and must not carry it with you outside the Examination Hall. You are, however, allowed to carry duplicate copy of OMR Sheet on conclusion of examination.
10. **Use only Blue/Black Ball point pen.**
11. **Use of any calculator or log table etc., is prohibited.**
12. **There is no negative marks for incorrect answers.**

## परीक्षार्थियों के लिए निर्देश

1. पहले पृष्ठ के ऊपर नियत स्थान पर अपना रोल नम्बर लिखिए ।
2. इस प्रश्न-पत्र में पचास बहुविकल्पीय प्रश्न हैं ।
3. परीक्षा प्रारम्भ होने पर, प्रश्न-पुस्तिका आपको दे दी जायेगी । पहले पाँच मिनट आपको प्रश्न-पुस्तिका खोलने तथा उसकी निम्नलिखित जाँच के लिए दिये जायेंगे, जिसकी जाँच आपको अवश्य करनी है :
   (i) प्रश्न-पुस्तिका खोलने के लिए उसके कवर पेज पर लगी कागज की सील को फाड़ लें । खुली हुई या बिना स्टीकर-सील की पुस्तिका स्वीकार न करें ।
   (ii) **कवर पृष्ठ पर छपे निर्देशानुसार प्रश्न-पुस्तिका के पृष्ठ तथा प्रश्नों की संख्या को अच्छी तरह चैक कर लें कि ये पूरे हैं । दोषपूर्ण पुस्तिका जिनमें पृष्ठ/प्रश्न कम हों या दुबारा आ गये हों या सीरियल में न हों अर्थात् किसी भी प्रकार की त्रुटिपूर्ण पुस्तिका स्वीकार न करें तथा उसी समय उसे लौटाकर उसके स्थान पर दूसरी सही प्रश्न-पुस्तिका ले लें । इसके लिए आपको पाँच मिनट दिये जायेंगे । उसके बाद न तो आपकी प्रश्न-पुस्तिका वापस ली जायेगी और न ही आपको अतिरिक्त समय दिया जायेगा ।**
   (iii) इस जाँच के बाद OMR पत्रक की क्रम संख्या इस प्रश्न-पुस्तिका पर अंकित कर दें ।
4. प्रत्येक प्रश्न के लिए चार उत्तर विकल्प (A), (B), (C) तथा (D) दिये गये हैं । आपको सही उत्तर के वृत्त को पेन से भरकर काला करना है जैसा कि नीचे दिखाया गया है ।
   **उदाहरण** : (A) (B) ● (D)
   जबकि (C) सही उत्तर है ।
5. प्रश्नों के उत्तर **केवल प्रश्न पत्र I के अन्दर दिये गये OMR पत्रक पर ही** अंकित करने हैं । यदि आप OMR पत्रक पर दिये गये वृत्त के अलावा किसी अन्य स्थान पर उत्तर चिह्नांकित करते हैं, तो उसका मूल्यांकन नहीं होगा ।
6. अन्दर दिये गये निर्देशों को ध्यानपूर्वक पढ़ें ।
7. कच्चा काम (Rough Work) इस पुस्तिका के अन्तिम पृष्ठ पर करें ।
8. यदि आप OMR पत्रक पर नियत स्थान के अलावा अपना नाम, रोल नम्बर, फोन नम्बर या कोई भी ऐसा चिह्न जिससे आपकी पहचान हो सके, अंकित करते हैं अथवा अभद्र भाषा का प्रयोग करते हैं, या कोई अन्य अनुचित साधन का प्रयोग करते हैं, तो परीक्षा के लिये अयोग्य घोषित किये जा सकते हैं ।
9. आपको परीक्षा समाप्त होने पर प्रश्न-पुस्तिका एवं मूल OMR पत्रक निरीक्षक महोदय को लौटाना आवश्यक है और परीक्षा समाप्ति के बाद उसे अपने साथ परीक्षा भवन से बाहर न लेकर जायें । हालांकि आप परीक्षा समाप्ति पर OMR पत्रक की डुप्लीकेट प्रति अपने साथ ले जा सकते हैं ।
10. **केवल नीले/काले बाल प्वाईंट पेन का ही इस्तेमाल करें ।**
11. **किसी भी प्रकार का संगणक (कैलकुलेटर) या लाग टेबल आदि का प्रयोग वर्जित है ।**
12. **गलत उत्तरों के लिए कोई अंक काटे नहीं जाएँगे ।**

# KANNADA

## Paper – II

**Note :** This paper contains **fifty (50)** objective type questions, each question carrying **two (2)** marks. Attempt **all** the questions.

**ಸೂಚನೆ** ಃ ಈ ಪತ್ರಿಕೆಯಲ್ಲಿ ಬಹು ಆಯ್ಕೆಯ **ಐವತ್ತು (50)** ಪ್ರಶ್ನೆಗಳಿರುತ್ತವೆ. ಪ್ರತಿಯೊಂದು ಪ್ರಶ್ನೆಗೂ **ಎರಡು (2)** ಅಂಕಗಳು ಇರುತ್ತವೆ. ಎಲ್ಲಾ ಪ್ರಶ್ನೆಗಳನ್ನು ಉತ್ತರಿಸಿರಿ.

**ಏಕ ಆಯ್ಕೆಯ ಮಾದರಿಯ ಪ್ರಶ್ನೆಗಳು ಃ**

**1.** 'ಇಸಿಲ' ಶಬ್ದ ಪ್ರಯೋಗವಾಗಿರುವ ಶಾಸನ

(A) ಬ್ರಹ್ಮಗಿರಿ ಶಾಸನ

(B) ಹಲ್ಮಿಡಿ ಶಾಸನ

(C) ಬನವಾಸಿ ಶಾಸನ

(D) ಆತಕೂರು ಶಾಸನ

**2.** 'ಪಳಗನ್ನಡ' ಪದವನ್ನು ಮೊಟ್ಟಮೊದಲು ಬಳಸಿರುವ ಕೃತಿ

(A) ಪಂಪ ಭಾರತ

(B) ಕವಿರಾಜ ಮಾರ್ಗ

(C) ವಡ್ಡಾರಾಧನೆ

(D) ಚಾವುಂಡರಾಯ ಪುರಾಣ

**3.** ಇದು ಷಡಕ್ಷರದೇವನ ಕೃತಿ

(A) ರುಕ್ಮಿಣಿ ವಿಲಾಸ

(B) ಶಾರದಾ ವಿಳಾಸ

(C) ರಾಜಶೇಖರ ವಿಳಾಸ

(D) ವೀರೇಶ ಚರಿತೆ

**4.** ಎರಡನೆಯ ನಾಗವರ್ಮನ ಆಶ್ರಯದಾತ

(A) ಚಾಲುಕ್ಯ ಜಗದೇಕಮಲ್ಲ

(B) ಒಂದನೆ ಬಲ್ಲಾಳ

(C) ಚಾಲುಕ್ಯ ಆಹವಮಲ್ಲ

(D) ಚಾಲುಕ್ಯ ಅರಿಕೇಸರಿ

**5.** 'ನಾಣ್ಣುಡಿ ದೇಸಿವೆತ್ತ ಪೊಸನುಡಿ ಮಾರ್ಗಂ' – ಇದು ಈ ಕೆಳಗಿನ ಕವಿಯ ಶೈಲಿಯ ಆದರ್ಶ

(A) ಬ್ರಹ್ಮಶಿವ (B) ನಾಗಚಂದ್ರ

(C) ನಾಗವರ್ಮ (D) ನಯಸೇನ

**6.** ದುರ್ಗಸಿಂಹನ 'ಪಂಚ ತಂತ್ರ' ಕೃತಿ ರಚನೆಗೆ ಪ್ರೇರಣೆ

(A) ವಿಷ್ಣುಭಟ್ಟ (B) ವಸುಭಾಗ ಭಟ್ಟ

(C) ದೇವಚಂದ್ರ (D) ಕರ್ಣಪಾರ್ಯ

**7.** ರತ್ನಾಕರವರ್ಣಿ ಕವಿಯ ಕಾಲ

(A) ಕ್ರಿ.ಶ. 1560 (B) ಕ್ರಿ.ಶ. 1660

(C) ಕ್ರಿ.ಶ. 1685 (D) ಕ್ರಿ.ಶ. 1720

**8.** ಸಿದ್ಧರಾಮನ ವಚನಾಂಕಿತ

(A) ಚೆನ್ನ ಮಲ್ಲಿಕಾರ್ಜುನ

(B) ಕಪಿಲ ಸಿದ್ಧಮಲ್ಲಿಕಾರ್ಜುನ

(C) ಸಿದ್ಧರಾಮನಾಥ

(D) ರಾಮನಾಥ

**9.** 'ತಾಳುವಿಕೆಗಿಂತ ತಪವು ಇಲ್ಲ' ಎಂದು ಹೇಳಿದವರು

(A) ಕನಕದಾಸ (B) ವ್ಯಾಸರಾಜ

(C) ವಾದಿರಾಜ (D) ಪುರಂದರದಾಸ

**10.** "ಮನುಜರ ಮೇಲೆ ಸಾವವರ ಮೇಲೆ ಕನಿಷ್ಠರ ಮೇಲೆ _______ ಅನವರತಂ ಪೊಗಳ್ದು ಕೆಡ ಬೇಡೆಲೆ ಮಾನವ" – ಎಂದ ಕವಿ

(A) ಹರಿಹರ (B) ಲಕ್ಕಣ್ಣ ದಂಡೇಶ

(C) ಮುದ್ದಣ (D) ಚೆನ್ನ ಬಸವಣ್ಣ

11. 'ಕೈವಲ್ಯ ಪದ್ಧತಿ' ಕೃತಿಯ ಕರ್ತೃ

(A) ಭೀಮ ಕವಿ

(B) ನಿಜಗುಣ ಶಿವಯೋಗಿ

(C) ಸರ್ವಜ್ಞ

(D) ಸಂಚಿ ಹೊನ್ನಮ್ಮ

12. 'ಮುದ್ರಾಮಂಜೂಷ' ಕೃತಿಯ ಕಥಾ ವಸ್ತು

(A) ಧಾರ್ಮಿಕ (B) ಸಾಮಾಜಿಕ

(C) ಆಧ್ಯಾತ್ಮಿಕ (D) ರಾಜಕೀಯ

13. 'ರಾಮಪಟ್ಟಾಭಿಷೇಕ' ಕೃತಿಯ ಕರ್ತೃ

(A) ಕೆಂಪು ನಾರಾಯಣ

(B) ಮುದ್ದಣ

(C) ದೇವಚಂದ್ರ

(D) ಕುಮಾರ ವಾಲ್ಮೀಕಿ

14. 'ಏಜಾಕ್ಸ್' ನಾಟಕದ ಕರ್ತೃ

(A) ಸಾಫೊಕ್ಲಿಸ್

(B) ಟಾಲ್‌ಸ್ಟಾಯ್

(C) ಯೂರಿಪಿಡೀಸ್

(D) ಈಸ್ಕಿಲಸ್

15. 'ಖಂಡಪ್ರಾಸ' ಎಂದರೆ

(A) ಅಂತ್ಯ ಪ್ರಾಸ (B) ಮಧ್ಯ ಪ್ರಾಸ

(C) ಅನು ಪ್ರಾಸ (D) ಆದಿ ಪ್ರಾಸ

16. ಅದ್ಭುತ ರಸದ ಸ್ಥಾಯಿ ಭಾವ

(A) ಭಯ (B) ಉತ್ಸಾಹ

(C) ಜಿಗುಪ್ಸೆ (D) ವಿಸ್ಮಯ

17. ಕುವೆಂಪು ಅವರ ಕೃತಿ

(A) ಗಣೇಶ ದರ್ಶನ (B) ಮಲಾರ

(C) ಗರಿ (D) ಕೊಳಲು

18. ಚಂದ್ರಶೇಖರ ಕಂಬಾರರ ನಾಟಕ

(A) ಯಯಾತಿ (B) ಚಾಳೇಶ

(C) ಟೊಳ್ಳುಗಟ್ಟಿ (D) ಅಪ್ಪ

19. ಶಿವರಾಮ ಕಾರಂತರಿಗೆ ಜ್ಞಾನಪೀಠ ಪ್ರಶಸ್ತಿಯನ್ನು ತಂದು ಕೊಟ್ಟ ಕೃತಿ :

(A) ಮೂಕಜ್ಜಿಯ ಕನಸುಗಳು

(B) ದುರ್ಗಾಸ್ತಮಾನ

(C) ಚಿಕವೀರ ರಾಜೇಂದ್ರ

(D) ಚಿರಸ್ಮರಣೆ

20. 'ಕೆಥಾರ್ಸಿಸ್' ಪರಿಕಲ್ಪನೆಯನ್ನು ರೂಪಿಸಿದವರು

(A) ಅರಿಸ್ಟಾಟಲ್ (B) ಪ್ಲೇಟೊ

(C) ವರ್ಡ್ಸ್‌ವರ್ತ್ (D) ಕೋಲ್‌ರಿಜ್

**ಬಹು ಆಯ್ಕೆಯ ಮಾದರಿಯ ಪ್ರಶ್ನೆಗಳು :**

21. ಇವರು ಸುಳಾದಿ ಪ್ರಕಾರದಲ್ಲಿ ಸಾಹಿತ್ಯವನ್ನು ರಚಿಸಿದವರು.

(i) ಶ್ರೀಪಾದರಾಯ ಮತ್ತು ನಿಜಗುಣ ಶಿವಯೋಗಿ

(ii) ಪುರಂದರದಾಸ ಮತ್ತು ವಿಜಯದಾಸ

(iii) ಗೋಪಾಲದಾಸ ಮತ್ತು ಕನಕದಾಸ

(iv) ವಾದಿರಾಜ ಮತ್ತು ಜಗನ್ನಾಥದಾಸ

**ಇವುಗಳಲ್ಲಿ ಸರಿಯಾದ ಉತ್ತರ :**

(A) (i) ಮತ್ತು (ii) (B) (ii) ಮತ್ತು (iv)

(C) (iii) ಮತ್ತು (i) (D) (ii) ಮತ್ತು (iii)

22. ಇವು ಅರ್ಥಾಂತರಕ್ಕೆ ಉದಾಹರಣೆಗಳು

(i) ಅಮ್ಮ ಮತ್ತು ಅವಸರ

(ii) ಬೃಹಸ್ಪತಿ ಮತ್ತು ಭಯಂಕರ

(iii) ಎಳ್ಳೆಣ್ಣೆ ಮತ್ತು ಮನೆ

(iv) ಆಟ ಮತ್ತು ಆನೆ

**ಇವುಗಳಲ್ಲಿ ಸರಿಯಾದ ಉತ್ತರ :**

(A) (i) ಮತ್ತು (iii) (B) (ii) ಮತ್ತು (iv)

(C) (iii) ಮತ್ತು (iv) (D) (i) ಮತ್ತು (ii)

**23.** ಕಾವ್ಯಮೀಮಾಂಸೆಯ ಕ್ಷೇತ್ರಕ್ಕೆ ಮೌಲಿಕ ಕೊಡುಗೆಯನ್ನು ನೀಡಿದವರು

(i) ಎಂ. ಚಿದಾನಂದ ಮೂರ್ತಿ

(ii) ತೀ.ನಂ. ಶ್ರೀಕಂಠಯ್ಯ

(iii) ಎಚ್. ತಿಪ್ಪೇರುದ್ರಸ್ವಾಮಿ

(iv) ಟಿ.ವಿ. ವೆಂಕಟಾಚಲ ಶಾಸ್ತ್ರಿ

**ಇವುಗಳಲ್ಲಿ ಸರಿಯಾದ ಉತ್ತರ :**

(A) (i) ಮತ್ತು (ii) (B) (ii) ಮತ್ತು (iii)

(C) (iii) ಮತ್ತು (iv) (D) (i) ಮತ್ತು (iii)

**24.** ಇವು ರೂಪಕಾಲಂಕಾರಗಳು

(i) ಮುಖಚಂದ್ರ ಮತ್ತು ಮುಗುಳ್ನಗೆ

(ii) ಕಿರುಪ್ರಶ್ನೆ ಮತ್ತು ಮಹಾಪ್ರಾಣ

(iii) ಕೃಷ್ಣಕೃಪೆ ಮತ್ತು ವಿಶ್ವನಾಥ

(iv) ಕೇಶಪಾಶ ಮತ್ತು ಅಪಕೀರ್ತ್ಯಂಗನೆ

**ಇವುಗಳಲ್ಲಿ ಸರಿಯಾದ ಉತ್ತರ :**

(A) (i) ಮತ್ತು (ii)

(B) (i) ಮತ್ತು (iii)

(C) (i) ಮತ್ತು (iv)

(D) (ii) ಮತ್ತು (iv)

**25.** ಈ ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಯಾದ ಹೊಂದಿಕೆಯಾಗುತ್ತದೆ ?

(i) ಅರಿಸ್ಟಾಟಲ್-ಪೊಯಿಟಿಕಾ

(ii) ವರ್ಡ್ಸ್‌ವರ್ತ್-ಲಿರಿಕಲ್‌ಬ್ಯಾಲೆಡ್ಸ್

(iii) ಲಾಂಜಿನಸ್-ಡಿಫೆನ್ಸ್ ಆಫ್ ಪೊಯಿಟ್ರಿ

(iv) ಇಲಿಯಟ್-ಆರ್ಟ್ಸ್ ಪೊಯಿಟಿಕಾ

**ಇವುಗಳಲ್ಲಿ ಸರಿಯಾದ ಉತ್ತರ :**

(A) (i) ಮತ್ತು (ii)

(B) (i) ಮತ್ತು (iv)

(C) (iii) ಮತ್ತು (i)

(D) (ii) ಮತ್ತು (iv)

**26.** ಇವು ವಿಮರ್ಶಾ ಕೃತಿಗಳು

(i) ಭಾರತ ಸಿಂಧುರಶ್ಮಿ

(ii) ಸಮಕಾಲೀನ

(iii) ಉರಿಯ ನಾಲಗೆ

(iv) ಯುಗ ಸಂಧ್ಯಾ

**ಇವುಗಳಲ್ಲಿ ಸರಿಯಾದ ಉತ್ತರ :**

(A) (i) ಮತ್ತು (iv)

(B) (ii) ಮತ್ತು (iii)

(C) (ii) ಮತ್ತು (iv)

(D) (iii) ಮತ್ತು (iv)

**27.** ಇವು ಮಾಸ್ತಿ ಅವರ ನಾಟಕಗಳು

(i) ಹರಿಜನ್ವಾರ ಮತ್ತು ವಿಗಡ ವಿಕ್ರಮರಾಯ

(ii) ಸಂಜೀವಿನಿ ಸಾವಿತ್ರಿ ಮತ್ತು ಆ ಊರು-ಈ ಊರು

(iii) ಕಾಕನ ಕೋಟೆ ಮತ್ತು ಪುರಂದರದಾಸ

(iv) ಯಶೋಧರಾ ಮತ್ತು ಮಂಜುಳ

**ಇವುಗಳಲ್ಲಿ ಸರಿಯಾದ ಉತ್ತರ :**

(A) (i) ಮತ್ತು (iii)

(B) (ii) ಮತ್ತು (iv)

(C) (iii) ಮತ್ತು (iv)

(D) (ii) ಮತ್ತು (iii)

**28.** ಇವು ದೇವನೂರು ಮಹಾದೇವ ಅವರ ಕೃತಿಗಳು

(i) ಒಡಲಾಳ (ii) ಕುಸುಮಬಾಲೆ

(iii) ನವರಾತ್ರಿ (iv) ಶಿವರಾತ್ರಿ

**ಇವುಗಳಲ್ಲಿ ಸರಿಯಾದ ಉತ್ತರ :**

(A) (i) ಮತ್ತು (ii)

(B) (i) ಮತ್ತು (iii)

(C) (ii) ಮತ್ತು (iv)

(D) (ii) ಮತ್ತು (iii)

**29.** ಇವು ತದ್ಭವ ಪದಗಳು

(i) ಹಕ್ಕಿ ಮತ್ತು ಜಾವ

(ii) ಶ್ರೀ ಮತ್ತು ಸಂಜೆ

(iii) ಪದುಮ ಮತ್ತು ಸ್ಥಾನ

(iv) ಜನ್ನ ಮತ್ತು ಜೊನ್ನ

**ಇವುಗಳಲ್ಲಿ ಸರಿಯಾದ ಉತ್ತರ :**

(A) (i) ಮತ್ತು (ii)

(B) (ii) ಮತ್ತು (iii)

(C) (iii) ಮತ್ತು (iv)

(D) (i) ಮತ್ತು (iv)

**30.** ಇವು ಅನ್ಯದೇಶ್ಯ ಪದಗಳು

(i) ಓಲೆ ಮತ್ತು ಎಲೆ

(ii) ಸಾಬೂನು ಮತ್ತು ಅನಾನಸ್

(iii) ಸ್ಕೂಲು ಮತ್ತು ಆಸ್ಪತ್ರೆ

(iv) ಬಳಪ ಮತ್ತು ಹಲಗೆ

**ಇವುಗಳಲ್ಲಿ ಸರಿಯಾದ ಉತ್ತರ :**

(A) (i) ಮತ್ತು (ii) (B) (ii) ಮತ್ತು (iv)

(C) (iii) ಮತ್ತು (iv) (D) (ii) ಮತ್ತು (iii)

**ಲೇಖನ ಭಾಗ ಆಧಾರಿತ ಬಹು ಆಯ್ಕೆಯ ಮಾದರಿ**

**ಈ ಕೆಳಗಿನ ಲೇಖನಭಾಗವನ್ನು ಓದಿಕೊಂಡು ಅದನ್ನು ಆಧರಿಸಿದ ಪ್ರಶ್ನೆಗಳಿಗೆ ಉತ್ತರಿಸಿರಿ. ಸರಿಯಾದ ಉತ್ತರಗಳ ಸಂಜ್ಞೆಗಳನ್ನು ನಿಗದಿತ ಸ್ಥಳಗಳಲ್ಲಿ ಗುರುತಿಸಿರಿ.**

**(31ನೇ ಪ್ರಶ್ನೆಯಿಂದ 35 ನೇ ಪ್ರಶ್ನೆಯ ವರೆಗೆ)**

ಪ್ರತಿಯೊಂದು ಪ್ರತೀಕಕ್ಕೂ ದಾರ್ಶನಿಕವಾದ ಅದರದರ ಭಿತ್ತಿಭೂಮಿಯೊಂದು ಇದ್ದೇ ಇರುತ್ತದೆ. ಸಂಕೇತಕ್ಕಿರುವಂತೆ ನಿಷ್ಕೃಷ್ಟ, ಸುಪರಿಮಿತ ಮತ್ತು ಸುಸ್ಪಷ್ಟವಾಗಿರುವ ಅರ್ಥಕ್ಕೆ ಬದಲಾಗಿ ಅರ್ಥಪರಿವೇಷವೊಂದು ಪ್ರತೀಕವನ್ನೆಲ್ಲ ಪರಿವೇಷ್ಟಿಸಿದಂತಿರುತ್ತದೆ; ಅಲ್ಲದೆ ಅದಕ್ಕೆ ಹೃದಯಪ್ರಾಯವಾಗಿ ಮತ್ತು ನಿತ್ಯಲಕ್ಷಣವಾಗಿ ಭಾವಕೋಶವೊಂದು ಶ್ವಾಸಕೋಶವೆಂಬಂತೆ ಸ್ಪಂದಿಸುತ್ತಿರುತ್ತದೆ. ಈ ಭಾವಮಯತೆ ಇರುವುದರಿಂದಲೆ ಸಾಹಿತ್ಯ ಪ್ರಪಂಚದಲ್ಲಿ ಪ್ರತೀಕಕ್ಕೆ ಒಂದು ವ್ಯಾಪಕವಾದ ಜೀವಂತ ಸ್ಥಾನ ದೊರೆ ಕೊಂಡಿದೆ. ರಾಜಕೀಯ ಮತ್ತು ಮತ ಪ್ರಪಂಚಗಳಲ್ಲಂತೂ ಅದೊಂದು ಶಕ್ತಿಯೂ ಶಕ್ತಿಪ್ರಣಾಳಿಕೆಯೂ ಆಗಿ ತನ್ನ ಪ್ರಬಲತೆಯನ್ನು ಸ್ಥಾಪಿಸಿಕೊಂಡಿದೆ : ಬರಿಯ ಅರಿವೆಯ ತುಂಡು ಕೆಲವು ಚಿಹ್ನೆಗಳನ್ನು ಧರಿಸಿ ಕೋಲಿನ ತುದಿಗೇರಿ ಧ್ವಜವಾಯಿತೆಂದರೆ ಕೋಟಿಕೋಟಿ ನಾಗರಿಕರ ಗೌರವ ನಮಸ್ಕಾರಗಳಿಗೆ ಭಾಜನವಾಗುತ್ತದೆ. ಅದು ಒಂದು ಜನಾಂಗದ ಮಾನಪ್ರತಿಷ್ಠೆಗಳಿಗೆ ಪ್ರತೀಕವಾಗುತ್ತದೆ. ಅದರ ಗೌರವ ರಕ್ಷಣೆಗಾಗಿ ಲಕ್ಷ ಲಕ್ಷ ಸೈನಿಕರು ಹತರಾಗಲು ಸಿದ್ಧರಾಗಿರುತ್ತಾರೆ ! ಬರಿಯ ಒಂದು ಹೊಳೆಯುವ ಲೋಹದ ಬಿಲ್ಲೆ ಮಾನಿನಿಯ ಕಂಠದ ಮಾಂಗಲ್ಯವಾಯಿತೆಂದರೆ ಊಹೆಗೂ ನಿಲುಕದ ಧ್ಯೇಯ ವಸ್ತುವಾಗಿ, ಆರಾಧ್ಯವಾಗಿ, ಪತಿವ್ರತೆಯ ನಿಷ್ಠೆಯ ದೇವಮೂರ್ತಿಯಾಗಿ ಪೂಜ್ಯವಾಗುತ್ತದೆ. ಬರಿಯ ಒಂದು ಹತ್ತಿಯ ದಾರ ಕೆಲವು ಸಂಸ್ಕಾರಗಳಿಗೊಳಗಾಗಿ ಹೆಗಲಿಗೇರಿತೆಂದರೆ ಏನೇನಾಗಲು ಕಾರಣವಾಗುವುದಿಲ್ಲ ? ಬರಿಯ ಒಂದು ಗುಂಡನೆಯ ಕಲ್ಲು ಗುರುವಿನ ದೀಕ್ಷೆವೊತ್ತು ವಕ್ಷಸ್ಥವಾಯಿತೆಂದರೆ ಮಹಾತತ್ವಗಳ ಮಂದಿರವಾಗಿ ಜೀವಕ್ಕೆ ಶಿವತ್ವವನ್ನು ತಂದು ಕೊಡುವ ತಪ:ಪೀಠವಾದರೂ ಆಗುತ್ತದೆ; ತಪ್ಪಿದರೆ ಮತಭ್ರಾಂತಿಯ ಭೂತಗಳನ್ನು ಕೆರಳಿಸಿ ಮಂಡೆಗಳನ್ನು ಚೆಂಡಾಡುವ ಚಂಡಿಕಾಶಕ್ತಿಯಾದರೂ

ಆಗುತ್ತದೆ ! ಅಡ್ಡಡ್ಡಲಾಗಿಟ್ಟಿರುವ ಬರಿಯ ಎರಡು ಮರದ ಮೋಪುಗಳು ಯೇಸುಕ್ರಿಸ್ತನ ಮರಣಸ್ತಂಭದ ಸಂಕೇತವಾಗಿ ಮೂಡಿ, ಎಂತೆಂತಹ ತ್ಯಾಗಗಳಿಗೆ ಪ್ರೇರಕವಾಗಿ, ಎಂತೆಂತಹ ಆದರ್ಶಗಳಿಗೆ ಆಗರವಾಗಿ, ಒಮ್ಮೊಮ್ಮೆ ಭಯಂಕರ ಅಕೃತ್ಯಗಳಿಗೂ ಪ್ರಮಾದವಶದಿಂದ ಕಾರಣವಾದರೂ, ಅದ್ಭುತ ಸೇವಾಸಂಸ್ಥೆಗಳಿಗೂ ದಲಿತ ದೀನೋದ್ಧಾರದ ಕರ್ಮಗಳಿಗೂ ಉದ್ಭವಸ್ಥಾನವಾಗಿ ಲೋಕಪೂಜೆಯನ್ನು ಇಂದಿಗೂ ಸ್ವೀಕರಿಸುತ್ತಿಲ್ಲವೆ ?

ರಾಜಕೀಯ, ಮತೀಯ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಪ್ರಚಲಿತವಾಗಿರುವ ಪ್ರತೀಕಗಳನ್ನು ಉಪಯೋಗಿಸಿಕೊಳ್ಳುವುದರ ಜೊತೆಗೆ ಸಾಹಿತ್ಯ ತನ್ನ ಕ್ಷೇತ್ರದಲ್ಲಿಯೆ ವಿಧವಿಧವಾದ ಅಸಂಖ್ಯಾತ ಪ್ರತೀಕಗಳನ್ನು ಸೃಷ್ಟಿಸಿಕೊಂಡು ರಸಮಯವಾದ ಸುಂದರ ಕಲಾಕೃತಿಗಳ ನಿರ್ಮಿತಿಗೆ ಅವಕಾಶ ಕಲ್ಪಿಸಿಕೊಟ್ಟಿದೆ. ಹುಟ್ಟುವಾಗ ಕೇವಲ ಸಂಕೇತ ಮಾತ್ರಗಳಾಗಿದ್ದು, ಅಭಿಧಾ ವೃತ್ತಿಯಿಂದ ನಿಷ್ಕೃಷ್ಟ ಸುಸ್ಪಷ್ಟ ಪರಿಮಿತಾರ್ಥಗಳಷ್ಟನ್ನೆ ಕೊಡುತ್ತಿದ್ದ ಅನೇಕಾನೇಕ ಶಬ್ದಗಳೂ ಪದಗುಂಫನಗಳೂ ಕಾಲಾನುಕ್ರಮದಲ್ಲಿ ಕವಿಪ್ರತಿಭಾ ವಶವಾಗಿ ಕಾವ್ಯಸೌಂದರ್ಯದಿಂದ ದೀಪ್ತವಾಗಿ ಭಾವಾಂಶ ಕಲ್ಪನಾಂಶ ಚಿಂತನಾಂಶಗಳ ದರ್ಶನ ಭಿತ್ತಿಯನ್ನೂ ಅರ್ಥಪರಿವೇಷವನ್ನೂ ಭಾವಕೋಶ ವನ್ನೂ ಪಡೆದು, ಉಪಮಾ ರೂಪಕಾದಿ ಅಲಂಕಾರಗಳಾಗಿ ಕವಿಸಮಯಾದಿಗಳಾಗಿ ಪರಿವರ್ತನೆಗೊಂಡು ಪ್ರತೀಕಸ್ವರೂಪಧಾರಣೆ ಮಾಡುತ್ತವೆ. ನಿಘಂಟುಗಳಲ್ಲಿ ನಿರ್ಜೀವವಾಗಿ ಕಲ್ಲಿನ ಗೊಂಬೆಗಳಂತೆ ಅಕಾರಾದಿಯ ಅನುಕೂಲ ಸೂತ್ರದ ಆಜ್ಞೆಗೆ ಅಧೀನವಾಗಿ ಕವಾಯಿತಿಗೆ ಒಳಗೊಂಡಂತಿರುವ ಶಬ್ದಶ್ರೇಣಿ ಕವಿಪ್ರತಿಭೆಯ ಭಾವವಿದ್ಯುತ್ತಿನ ಐಂದ್ರಜಾಲಕ್ಕೆ ಸಿಕ್ಕಿ ಜಾಗ್ರತವಾಗಿ ಚಿನ್ಮಯವಾಗುತ್ತವೆ. ಕಾವ್ಯೋಚಿತ ಸ್ಥಾನದಲ್ಲಿ ನಿಂತಾಗಲಂತೂ ಆ ಯ:ಕಶ್ಚಿತವಾದಂತಿದ್ದ ಪದ ವಿಗ್ರಹಗಳಲ್ಲಿ ದೇವತಾಚೈತನ್ಯ ಸಂಚಾರವಾಗುತ್ತದೆ. ಆಗ ಅವು ಸರಸ್ವತಿಯ ಸಾಕ್ಷಾತ್ ಚರಣಚಿಹ್ನೆಗಳಾಗಿ ಪ್ರೋಜ್ವಲಿಸುತ್ತವೆ.

ಸಂಕೇತ ಮತ್ತು ಪ್ರತೀಕಗಳಂತೆಯೆ, ಆದರೆ ಅವಕ್ಕೆ ಮೀರಿದ ಪದವಿಯಲ್ಲಿ ಸಾಹಿತ್ಯ ಸಾಮ್ರಾಜ್ಯದ ಸಿಂಹಾಸನ ಸ್ಥಾನದಲ್ಲಿರುವ ಇನ್ನೊಂದು ವಿಧಾನವೆಂದರೆ ಪ್ರತಿಮಾ.

'ಪ್ರತೀಕ' 'ಸಂಕೇತ' ದ ಮುಂದುವರಿಕೆ ಅಥವಾ ವಿಸ್ತರಣೆಯಾಗಿರುವಂತೆ 'ಪ್ರತಿಮೆ' 'ಪ್ರತೀಕ' ದ ಒಂದು ಲೋಕೋತ್ತರವಾದ ಆವಿರ್ಭೂತಿಯಾಗಿರುತ್ತದೆ. ಆದರೆ 'ಪ್ರತಿಮೆ' 'ಸಂಕೇತ' ದಂತೆ ಜಾಗ್ರತ್‌ಬುದ್ಧಿಯ ರಚನೆಯೂ ಅಲ್ಲ, 'ಪ್ರತೀಕ'ದಂತೆ ಬುದ್ಧಿಕ್ರಿಯೆಯಿಂದ ಸಂಭವಿಸುವ ರಚನೆಗೆ ಒದಗುವ ಭಾವಮಯತೆಯಿಂದಲೂ ಅದು ಸಿದ್ಧವಾಗುವುದಿಲ್ಲ. ವಾಸ್ತವ ಜಗತ್ತಿನಲ್ಲಾಗುವ ಸಹಜಸೃಷ್ಟಿಯಂತೆ ಕಲಾಜಗತ್ತಿನಲ್ಲಿ ಮೂಡುವ ಅದು ತನಗೆ ತಾನೆಂಬಂತೆ ಸಂಭವಿಸುವ ಒಂದು 'ಸೃಜನೆ.' ಜಡ, ಪ್ರಾಣ ಮತ್ತು ಮನಸ್ಸುಗಳನ್ನು ಅವುಗಳ ಸುಪ್ರಕಟ ಸ್ಥಿತಿಯಲ್ಲಿ ನಾವು ಸುಲಭವಾಗಿ ಗುರುತಿಸಬಹುದಾದರೂ, ಎಲ್ಲಿ ಜಡತ್ವ ಮುಗಿದು ಪ್ರಾಣತ್ವ ಪ್ರಾರಂಭವಾಗುತ್ತದೆ ? ಎಲ್ಲಿ ಪ್ರಾಣತ್ವ ಪೂರೈಸಿ ಮನಸ್‌ತತ್ವ ಸ್ಪಂದಿಸತೊಡಗುತ್ತದೆ ? ಎಂಬುದನ್ನು ಅವುಗಳ ಸಂಧಿಸ್ಥಾನಗಳಲ್ಲಿ ಬುದ್ಧಿಸ್ಪಷ್ಟ ಮಾಡಿಕೊಳ್ಳಲು ಹೇಗೆ ಕಷ್ಟವಾಗುತ್ತದೆಯೊ ಹಾಗೆಯೆ ಸಂಕೇತದಿಂದ ಪ್ರತೀಕ ಎಲ್ಲಿ ಪ್ರತ್ಯೇಕಗೊಳ್ಳುತ್ತದೆ ? ಪ್ರತೀಕದಿಂದ ಮುಂಬರಿದು ಪ್ರತಿಮೆ ಎಲ್ಲಿ ತನ್ನ ಅಸ್ತಿತ್ವವನ್ನು ಪ್ರಕಟಿಸುತ್ತದೆ ?

ಎಂಬುದನ್ನು ಅವುಗಳ ಸಂಧಿಸ್ಥಾನಗಳಲ್ಲಿ ಖಚಿತವಾಗಿ ಗ್ರಹಿಸಲು ಕಷ್ಟವಾಗುತ್ತದೆ. ಆದರೆ ಅವು ಪೂರ್ಣ ವಿಕಾಸಗೊಂಡಾಗ, ತಮ್ಮ ಸುಪ್ರಕಟ ಸ್ಥಿತಿಯಲ್ಲಿ ತಮ್ಮ ಸ್ವರೂಪಪರಿಚಯದ ಮೇಲೆ ಯಾವ ಸಂದಿಗ್ಧತೆಯ ಪರದೆಯನ್ನೂ ಎಳೆದುಕೊಳ್ಳುವುದಿಲ್ಲ. ಉತ್ತಮ ಸಹೃದಯನಿಗೆ ಮುಖ ಕಂಡೊಡನೆಯೆ ಹೃದಯ ಗೋಚರವಾಗುತ್ತದೆ.

ಒಂದು ಸೆಗಣಿ ಉಂಡೆಗೆ ಹತ್ತೆಂಟು ಹಸಿಯ ಗರುಕೆಯ ಹುಲ್ಲೆಸಳು ಸಿಕ್ಕಿಸಿ, ಒಂದು ಹಸಿಯ ಹಲಸಿನ ಎಲೆಯನ್ನು ಅದಕ್ಕೆ ಪೀಠಗೈದು, ತುಳಸಿ ಕಟ್ಟೆಯ ಮೇಲಿಟ್ಟು, ಅದಕ್ಕೆ ಹೂವು ಮುಡಿಸಿ, ಹಾಲು ಎರೆದು, 'ಗಣಪತಿ' ಎಂದು ಪೂಜೆಗೈದರೆ ಅದು ಪ್ರತೀಕಾರಾಧನೆಯಾಗುತ್ತದೆ. ಸೊಂಡಿಲು, ಆನೆಮೊಗ, ಕಿರೀಟ, ನಾಲ್ಕು ಕೈಗಳು, ಹಾವು ಸುತ್ತಿದ ದೊಡ್ಡ ಹೊಟ್ಟೆ ಇತ್ಯಾದಿಗಳೆಲ್ಲ ಇದ್ದು ಗಣೇಶ ವಿಗ್ರಹವಾದರೆ ಅದು ಪ್ರತಿಮಾರಾಧನೆಯಾಗುತ್ತದೆ. ಪ್ರತೀಕ ಸಂಪ್ರದಾಯದಿಂದ ಸಂಪ್ರದಾಯಕ್ಕೆ ಸ್ವಲ್ಪ ಬದಲಾವಣೆ ಹೊಂದಬಹುದು, ಅಥವಾ ಆಯಾ ಸ್ಥಳದ ಅನುಕೂಲ ಅವಶ್ಯಕತೆಗಳಿಗನುಸಾರವಾಗಿ ರಚನಾ ಸಾಮಗ್ರಿಯಲ್ಲಿ ಭಿನ್ನತೆ ತೋರಬಹುದು. ಬಹುಶ: ಒಂದೂರಿನ ಒಂದು ಮನೆತನದವರು ಗೋಮಯಕ್ಕೆ ದೂರ್ವಾಂಕುರಗಳನ್ನು ಸಿಕ್ಕಿಸಿದರೆ, ಇನ್ನೊಂದೂರಿನ ಇನ್ನೊಂದು ಮನೆತನದವರು ಮಣ್ಣುಂಡೆಗೆ ಒಂದು ಹೂವು ಸಿಕ್ಕಿಸಿ 'ಗಣಪತಿ' ಮಾಡಿಕೊಳ್ಳಬಹುದು. ಆದರೆ 'ಪ್ರತಿಮೆ' ಒಂದು ಧರ್ಮದವರಿಗೆಲ್ಲಾ ಒಂದೇ ರೀತಿಯಲ್ಲಿ ಇರುತ್ತದೆ, ವಿವರಗಳಲ್ಲಿ ತುಸು ವ್ಯತ್ಯಾಸಗಳಿರಬಹುದಾದರೂ. ಏಕೆಂದರೆ 'ಪ್ರತಿಮೆ' ಯಾವ ಒಬ್ಬ ವ್ಯಕ್ತಿಯ ಒಂದು ಮನಸ್ಸಿನ ರಚನೆಯಲ್ಲ; ಅದು ಒಂದು ಧರ್ಮಕ್ಕೆ ಸೇರಿದ ಒಂದು ಜನಾಂಗದ ಸಮಷ್ಟಿಮನಸ್ಸಿನ ಸಾಮೂಹಿಕ ಸೃಜನೆ, ಉದ್ಭವರೂಪ ಸೃಷ್ಟಿ, ಅವಿಚಾರಕ ಆವಿರ್ಭೂತಿ. ಅದು ಅತೀತದ ಆವಶ್ಯಕವಾದ ಒತ್ತಡದಿಂದ ಅವಶವಾಗಿ ಮೈದೋರುವ ಸಂಭೂತಿ. ಅದರ ಹಿಂದೆ ಋತಚಿತ್ತಿನ ಸತ್ಯಸಂಕಲ್ಪವಿರುವುದರಿಂದ ಅದೊಂದು ನಿಗ್ರಹಾನುಗ್ರಹ ಸಮರ್ಥವಾದ ದೇವತಾ ವಿಭೂತಿ.

ಪ್ರತಿಮೆಗಳಲ್ಲಿ ಅವುಗಳ ಸೃಷ್ಟಿವಿಧಾನಗಳನ್ನು ಗಮನಿಸಿದರೆ ಎರಡು ರೀತಿಯವು ಕಂಡುಬರುತ್ತವೆ. ಮೊದಲನೆಯದನ್ನು ಅವರೋಹಣ ಕ್ರಮದ್ದೆಂದೂ ಎರಡನೆಯದನ್ನು ಆರೋಹಣ ಕ್ರಮದ್ದೆಂದೂ ಕರೆಯಬಹುದು. ಅತೀತ ಲೋಕಗಳಲ್ಲಿಯ ಯಾವುದಾದರೂ ಶಕ್ತಿ ಅಥವಾ ದೇವತೆ ಇಂದ್ರಿಯ ಪ್ರಪಂಚದಲ್ಲಿ ಪ್ರಕಟವಾಗಬೇಕಾದರೆ ಅದು ಇಲ್ಲಿಯ ಕಾಲದೇಶ ನಾಮರೂಪಗಳ ಚೌಕಟ್ಟಿಗೆ ಇಳಿದು ಮೈದೋರುತ್ತದೆ. ಅದು ಯಾವ ಪ್ರಯತ್ನ ಪೂರ್ವಕವಾದ ಕೃತಕರಚನೆಯ ಫಲವೂ ಆಗಿರುವುದಿಲ್ಲ. ಅದು ಸಹಜ ಸಂಭವ. ಒಂದು ಉದ್ದೇಶ ಸಾಧನೆಗಾಗಿ ತನ್ನ ಇಚ್ಛಾಶಕ್ತಿಯಿಂದಲೆ ತನಗೆ ತಾನೆ ಆಗುವ ಅವತರಣ. ಅದು ಅವರೋಹಣ ಕ್ರಮದ್ದಾಗಿರುತ್ತದೆ. ಆರೋಹಣ ಕ್ರಮದಿಂದ ಸಿದ್ಧವಾಗುವ ಇನ್ನೊಂದು ರೀತಿಯ ಪ್ರತಿಮೆ ಭಕ್ತಿಭಾವಮಯ ಪ್ರಚೋದನೆಯಿಂದ ಪ್ರೇರಿತವಾದರೂ ಭಾವದೀಪ್ತ ಬುದ್ಧಿಯ ನೆರವನ್ನು ಪಡೆದು ಪ್ರಜ್ಞಾಪೂರ್ವಕವಾಗಿಯೆ ರಚಿತವಾಗುತ್ತದೆ. ಹಾಗೆ ರಚಿತವಾಗುವ ಪ್ರತಿಮೆಯಲ್ಲಿ ಉಪಾಸಕನ ಶ್ರದ್ಧೆಯ, ಭಕ್ತಿಯ ಮತ್ತು ಅಭೀಪ್ಸೆಯ ಮಹಿಮೆಯಿಂದ, ಕರೆಯಿಂದ, ಆಹ್ವಾನದಿಂದ ಪ್ರಾಣ ಪ್ರತಿಷ್ಠೆಯಾಗಿ ಅತೀತದ ದೇವತಾ ಶಕ್ತಿಯ ಆವಾಹನವಾಗುತ್ತದೆ. ಅಂತಹ ವಿಗ್ರಹವನ್ನು 'ಜಾಗ್ರತ' ಪ್ರತಿಮೆಯೆಂದು ಕರೆಯುತ್ತಾರೆ.

ಮೊದಲನೆಯದರಲ್ಲಿ ತನ್ನ ವಿಗ್ರಹವನ್ನು ತಾನೆ ಮಾಡಿಕೊಳ್ಳುವ ಶಕ್ತಿ ಅವತರಿಸಿ ಪ್ರತಿಮೆಯಾಗಿ ಮೂಡುತ್ತದೆ; ಎರಡನೆಯದರಲ್ಲಿ ಮಾಡಿದ ವಿಗ್ರಹಕ್ಕೆ ಶಕ್ತಿ ಅವತರಿಸಿ 'ಜಾಗ್ರತ' ವನ್ನಾಗಿಸುತ್ತದೆ. ಒಟ್ಟಿನ ಮೇಲೆ ತುದಿಯಲ್ಲಿ ಒದಗುವ ಫಲ ರೂಪದಲ್ಲಿ ಎರಡೂ ಒಂದೆ. ಅಂತಹ ಪ್ರತಿಮೆಗಳನ್ನು 'ಅರ್ಚಾವತಾರ' ಎಂದೂ ಕರೆಯುತ್ತಾರೆ. ಎಂದರೆ ಭಗವಂತನು ಲೋಕಾನುಗ್ರಹಕ್ಕಾಗಿ ಮತ್ತು ಲೋಕಸಂಗ್ರಹಕ್ಕಾಗಿ ಅನೇಕಾನೇಕ ಅವತಾರಗಳನ್ನು ಎತ್ತುವಂತೆ ಭಕ್ತನು ಪೂಜಿಸುವ 'ವಿಗ್ರಹ' ದ ಅವತಾರವನ್ನೂ ಎತ್ತುತ್ತಾನೆ ಎಂದರ್ಥ.

**31.** ಈ ಲೇಖನದ ಪ್ರಧಾನ ಆಶಯ

(A) ಸಾಹಿತ್ಯದಲ್ಲಿ ಪ್ರತೀಕವನ್ನು ಕುರಿತ ವಿಚಾರ

(B) ಸಾಹಿತ್ಯ ಸಂಕೇತ, ಉಪಮೆ, ರೂಪಕಗಳನ್ನು ಕುರಿತ ವಿಚಾರ

(C) ಪ್ರತಿಮೆಯನ್ನು ಕುರಿತ ವಿಚಾರ

(D) ಸಾಹಿತ್ಯದಲ್ಲಿ ಪ್ರತಿಮೆಯು ಸೃಷ್ಟಿಗೊಳ್ಳುವ ವಿಚಾರ

**32.** ಪ್ರತೀಕದ ಪ್ರಮುಖ ಪ್ರಾಣವಿರುವುದು

(A) ಭಾವನೆಯ ಧಾರಣವು ಅದರಲ್ಲಿ ಅಡಕವಾಗಿರುವುದರಿಂದ

(B) ಭಾವನೆಗಳ ಪ್ರತಿಷ್ಠಾಪನೆ ಅದರಲ್ಲಿ ಆಗಬೇಕಾಗುವುದರಿಂದ

(C) ರಾಜಕೀಯ ಕ್ಷೇತ್ರದಲ್ಲಿ ಅದು ಬಳಕೆಯಾಗುವುದರಿಂದ

(D) ದೇವರಾಗಿ ಅದು ಪ್ರಜ್ವಲಿಸುವುದರಿಂದ.

**33.** ಪ್ರತಿಮೆಯು ಯಾವುದರ ಮುಂದುವರಿದ ಸೃಷ್ಟಿಯಾಗಿದೆ ?

(A) ಸಂಕೇತದ ಮುಂದುವರಿಕೆಯಾಗಿದೆ.

(B) ಸಂಕೇತವನ್ನು ಮರು ಸೃಷ್ಟಿಗೊಳಿಸಿದ್ದಾಗಿದೆ.

(C) ಸಂಕೇತದಿಂದ ಮುಂದುವರಿದ ಪ್ರತೀಕವು ವಿಭಿನ್ನವಾಗಿ ತನ್ನ ಸ್ವರೂಪವನ್ನು ವಿಶಿಷ್ಟಗೊಳಿಸುವುದರಿಂದ ಸೃಷ್ಟಿಯಾಗಿದೆ.

(D) ಉಪಮೆ, ರೂಪಕ, ಪ್ರತೀಕಗಳ ಸಂಗಮದಿಂದ ಸೃಷ್ಟಿಯಾಗಿದೆ.

**34.** ಪ್ರತಿಮೆಯ ಸ್ವರೂಪವು

(i) ವ್ಯಕ್ತಿಯ ಸೃಷ್ಟಿಯಾಗಿದೆ

(ii) ಸಮಷ್ಟಿ ಮನಸ್ಸಿನ ಸೃಷ್ಟಿಯಾಗಿದೆ

(iii) ಆಚರಣಾ ಪ್ರಧಾನವಾದುದು.

(iv) ಆವಿರ್ಭೂತಿ ಗುಣವಿರುವುದರಿಂದ ಸ್ವಯಂಭೂ ಆಗಿರುತ್ತದೆ.

**ಇವುಗಳಲ್ಲಿ ಸರಿಯಾದ ಉತ್ತರ :**

(A) (i) ಮತ್ತು (ii)

(B) (ii) ಮತ್ತು (iv)

(C) (iii) ಮತ್ತು (iv)

(D) (i) ಮತ್ತು (iii)

35. ಪ್ರತಿಮೆಗಳಲ್ಲಿ 'ಅರ್ಚಾವತಾರ' ಎಂದು ಕರೆಯುವುದು

(i) ಆರೋಹಣ, ಅವರೋಹಣ ಪ್ರತಿಮೆಗಳನ್ನು

(ii) ಆರೋಹಣ ಪ್ರತಿಮೆಯನ್ನು

(iii) ಪೂಜೆಗೆ ಗುರಿಯಾಗುವ ಪ್ರತಿಮೆಗಳನ್ನು

(iv) ಭಗವಂತನ ಅವತಾರವನ್ನು

**ಇವುಗಳಲ್ಲಿ ಸರಿಯಾದ ಉತ್ತರ :**

(A) (i) ಮತ್ತು (iv) (B) (ii) ಮತ್ತು (iv)

(C) (i) ಮತ್ತು (iii) (D) (iii) ಮತ್ತು (iv)

36. **ಹೇಳಿಕೆ :** 'ಅರಿಯಬಾರದ ಘನವನರಿದವರು ಅರಿಯದಂತಿರ್ಪರು'

**ವಿವರಣೆ :** ಪರಾತ್ಪರ ವಸ್ತುವನ್ನು ತಿಳಿದವರು ತಿಳಿಯದವರಂತೆ ಇರುತ್ತಾರೆ.

**ಇವುಗಳಲ್ಲಿ ಸರಿಯಾದ ಉತ್ತರ :**

(A) ಹೇಳಿಕೆ ಸರಿ, ವಿವರಣೆಯು ಸರಿ

(B) ಹೇಳಿಕೆ ಸರಿ, ವಿವರಣೆ ತಪ್ಪು

(C) ಹೇಳಿಕೆ ತಪ್ಪು, ವಿವರಣೆಯು ತಪ್ಪು

(D) ಹೇಳಿಕೆ ತಪ್ಪು, ವಿವರಣೆ ಸರಿ

37. **ಹೇಳಿಕೆ :** 'ಅಬ್ಧಿಯುಮೊರ್ಮೆ ಕಾಲವಶದಿಂ ಮರ್ಯಾದೆಯಂ ಮೀರಿ ಮೇರೆ ದಾಂಟದೇ'

**ವಿವರಣೆ :** ಸಮುದ್ರವು ಕಾಲ ಕಾಲಕ್ಕೆ ತನ್ನ ಗಡಿಯನ್ನು ಮತ್ತೆ ಮತ್ತೆ ದಾಟಿ ಹೋಗುತ್ತಿರುತ್ತದೆ.

**ಇವುಗಳಲ್ಲಿ ಸರಿಯಾದ ಉತ್ತರ :**

(A) ಹೇಳಿಕೆ ತಪ್ಪು, ವಿವರಣೆ ತಪ್ಪು

(B) ಹೇಳಿಕೆ ಸರಿ, ವಿವರಣೆ ತಪ್ಪು

(C) ಹೇಳಿಕೆ ಸರಿ, ವಿವರಣೆಯೂ ಸರಿ

(D) ಹೇಳಿಕೆ ತಪು , ವಿವರಣೆ ಸರಿ

38. **ಹೇಳಿಕೆ :** 'ಕಾವ್ಯಂ ಯಶಸೇ ಅರ್ಥಕೃತೇ ವ್ಯವಹಾರ ವಿದೇ ಶಿವೇತರಕ್ಷತಯೇ'

**ವಿವರಣೆ :** ಕಾವ್ಯದಿಂದ ಕೀರ್ತಿ, ಸಂಪತ್ತು, ವ್ಯವಹಾರ ಕೌಶಲ್ಯ ಮತ್ತು ಅಮಂಗಳ ನಿವಾರಣೆಯಾಗುತ್ತದೆ.

**ಇವುಗಳಲ್ಲಿ ಸರಿಯಾದ ಉತ್ತರ :**

(A) ಹೇಳಿಕೆ ತಪ್ಪು, ವಿವರಣೆ ಸರಿ

(B) ಹೇಳಿಕೆ ಸರಿ, ವಿವರಣೆ ತಪ್ಪು

(C) ಹೇಳಿಕೆ ತಪ್ಪು, ವಿವರಣೆ ತಪ್ಪು

(D) ಹೇಳಿಕೆ ಸರಿ, ವಿವರಣೆಯೂ ಸರಿ

39. **ಹೇಳಿಕೆ :** 'ಭೃಂಗದ ಬೆನ್ನೇರಿ ಬಂತು ಕಲ್ಪನಾ ವಿಲಾಸ ಮಸೆದ ಗಾಳಿ ಪಕ್ಕ ಪಡೆಯುತಿತ್ತು ಸಹಜಪ್ರಾಸ'

**ವಿವರಣೆ :** ಕವಿಯ ಕಲ್ಪನಾ ವಿಲಾಸವು ಎತ್ತಿನ ಹೆಗಲನ್ನೇರಿ ಬರುತ್ತಿದೆ; ಗಾಳಿಯು ಚೂಪುಗೊಂಡು ರೆಕ್ಕೆ ಇಲ್ಲದೆ ಪ್ರಾಸರಹಿತವಾಗಿ ನುಗ್ಗುತ್ತಿದೆ.

**ಇವುಗಳಲ್ಲಿ ಸರಿಯಾದ ಉತ್ತರ :**

(A) ಹೇಳಿಕೆ ಸರಿ, ವಿವರಣೆ ಸರಿ

(B) ಹೇಳಿಕೆ ಸರಿ, ವಿವರಣೆ ತಪ್ಪು

(C) ಹೇಳಿಕೆ ತಪ್ಪು, ವಿವರಣೆ ತಪ್ಪು

(D) ಹೇಳಿಕೆ ತಪ್ಪು, ವಿವರಣೆ ಸರಿ

40. ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುತ್ತದೆ ?

(A) ಪೊನ್ನ - ಭುವನೈಕರಾಮಾಭ್ಯುದಯ

(B) ರನ್ನ - ಆದಿಪುರಾಣ

(C) ನಾಗಚಂದ್ರ - ಧರ್ಮಾಮೃತ

(D) ಜಿನಸೇನಾಚಾರ್ಯ - ವಡ್ಡಾರಾಧನೆ

**41.** ಕೆಳಗಿನ ಜೋಡಿಗಳಲ್ಲಿ ಯಾವುದು ಸರಿ ಹೊಂದುವುದಿಲ್ಲ ?

(A) ಎಂ. ಗೋವಿಂದ ಪೈ - ಗೋಲ್ಗೊಥಾ

(B) ಕುವೆಂಪು - ಕಾನೂರು ಹೆಗ್ಗಡಿತಿ

(C) ಬೇಂದ್ರೆ - ನಾಕು ತಂತಿ

(D) ಬಿ.ಎಂ. ಶ್ರೀಕಂಠಯ್ಯ - ಆಂಗ್ಲ ಕವಿತಾವಳಿ

**42.** ಕೆಳಗಿನ ಜೋಡಿಗಳಲ್ಲಿ ಯಾವುದು ಹೊಂದಿಕೆ ಯಾಗುತ್ತದೆ ?

(A) ರುದ್ರಭಟ್ಟ - ಛಂದೋಂಬುಧಿ

(B) ನಾಗವರ್ಮ-I - ಭಾಷಾಭೂಷಣ

(C) ಕೇಶಿರಾಜ - ಶಬ್ದಮಣಿದರ್ಪಣ

(D) ತೀ.ನಂ.ಶ್ರೀಕಂಠಯ್ಯ-ಕಾವ್ಯಾವಲೋಕನ

**43.** ಈ ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುವುದಿಲ್ಲ ?

(A) ಪಿ.ಲಂಕೇಶ್ - ಸಂಕ್ರಾಂತಿ

(B) ಶಾಂತಿನಾಥ ದೇಸಾಯಿ - ಮುಕ್ತಿ

(C) ಯಶವಂತ ಚಿತ್ತಾಲ - ಶಿಕಾರಿ

(D) ಸಿದ್ಧಲಿಂಗಯ್ಯ - ಒಡಲಾಳ

**44.** ಈ ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುತ್ತದೆ ?

(A) ಕೆಂಪುಕಮಲ - ಕರ್ಮಧಾರಯ ಸಮಾಸ

(B) ಹಿಂಬಾಗಿಲು - ದ್ವಂದ್ವ ಸಮಾಸ

(C) ರಾಮಕೃಷ್ಣರು - ಅಂಶಿ ಸಮಾಸ

(D) ಚಕ್ರಿ - ಅರಿಸಮಾಸ

**45.** ಬಹು ಆಯ್ಕೆಯ ಜೋಡಣೆ

| | |
|---|---|
| (a) ಪುರಂದರ-ದಾಸರು | (i) ನಮ್ಮಮ್ಮ ಶಾರದೆ ಉಮಾಮಹೇಶ್ವರಿ |
| (b) ಕನಕ-ದಾಸರು | (ii) ಅರಿತವರಿಗತಿ ಸುಲಭ ಹರಿಯ ಪೂಜೆ |
| (c) ವಿಜಯ-ದಾಸರು | (iii) ಪವಮಾನ ಜಗದ ಪ್ರಾಣ |
| (d) ಜಗನ್ನಾಥ-ದಾಸರು | (iv) ಮಾನವ ಜನ್ಮ ದೊಡ್ಡದು |
| | (v) ಶ್ರೀರಂಗ ವಿಠಲನ ಶ್ರೀಮುಕುಟಕೆ ಶರಣು |

ಇವುಗಳಲ್ಲಿ ಸರಿಯಾದ ಉತ್ತರ :

| | (a) | (b) | (c) | (d) |
|---|---|---|---|---|
| (A) | (iv) | (i) | (iii) | (ii) |
| (B) | (i) | (v) | (iv) | (iii) |
| (C) | (iv) | (iii) | (v) | (i) |
| (D) | (iv) | (ii) | (i) | (iii) |

**46.** ಬಹು ಆಯ್ಕೆಯ ಜೋಡಣೆ

| | |
|---|---|
| (a) ಗೀತಾ ನಾಗಭೂಷಣ | (i) ವರ್ಧಮಾನ |
| (b) ಜಿ.ಎಸ್. ಶಿವರುದ್ರಪ್ಪ | (ii) ಊರುಕೇರಿ |
| (c) ಗೋಪಾಲಕೃಷ್ಣ ಅಡಿಗ | (iii) ಬದುಕು |
| (d) ಪೂರ್ಣಚಂದ್ರ ತೇಜಸ್ವಿ | (iv) ಕಾವ್ಯಾರ್ಥ ಚಿಂತನ |
| | (v) ಕರ್ವಾಲೊ |

ಇವುಗಳಲ್ಲಿ ಸರಿಯಾದ ಉತ್ತರ :

| | (a) | (b) | (c) | (d) |
|---|---|---|---|---|
| (A) | (iii) | (v) | (iv) | (ii) |
| (B) | (ii) | (i) | (iv) | (iii) |
| (C) | (iv) | (ii) | (i) | (v) |
| (D) | (iii) | (iv) | (i) | (v) |

47. ಬಹು ಆಯ್ಕೆಯ ಜೋಡಣೆ

| | |
|---|---|
| (a) ಭವ್ಯತೆ | (i) ಟಿ.ಎಸ್. ಇಲಿಯಟ್ |
| (b) ಅನುಕರಣವಾದ | (ii) ಐ.ಎ. ರಿಚರ್ಡ್ಸ್ |
| (c) ವ್ಯಕ್ತಿತ್ವ ನಿರಸನ | (iii) ಕೋಲ್‌ರಿಜ್ |
| (d) ಇಮ್ಯಾಜಿನೇಷನ್ | (iv) ಲಾಂಜಿನಸ್ |
| | (v) ಅರಿಸ್ಟಾಟಲ್ |

ಇವುಗಳಲ್ಲಿ ಸರಿಯಾದ ಉತ್ತರ :

| | (a) | (b) | (c) | (d) |
|---|---|---|---|---|
| (A) | (iv) | (v) | (ii) | (iii) |
| (B) | (iv) | (v) | (i) | (iii) |
| (C) | (ii) | (iii) | (iv) | (v) |
| (D) | (iii) | (ii) | (v) | (iv) |

ಅನುಕ್ರಮ ಮಾದರಿ

ಈ ಕೆಳಗಿನವುಗಳಲ್ಲಿ ಸರಿಯಾದ ಕಾಲಾನುಕ್ರಮಣಿಕೆಯನ್ನು ಗುರುತಿಸಿ

48. (A) ಅಜಿತಪುರಾಣ, ಜಗನ್ನಾಥವಿಜಯ, ಕುಮಾರರಾಮನ ಸಾಂಗತ್ಯ ಹರಿಕಥಾಮೃತಸಾರ.
(B) ಹರಿಕಥಾಮೃತಸಾರ, ಕುಮಾರರಾಮನ ಸಾಂಗತ್ಯ, ಜಗನ್ನಾಥ ವಿಜಯ, ಅಜಿತಪುರಾಣ
(C) ಕುಮಾರರಾಮನ ಸಾಂಗತ್ಯ ಹರಿಕಥಾಮೃತಸಾರ, ಜಗನ್ನಾಥ ವಿಜಯ, ಅಜಿತ ಪುರಾಣ
(D) ಜಗನ್ನಾಥ ವಿಜಯ, ಅಜಿತಪುರಾಣ, ಹರಿಕಥಾಮೃತಸಾರ, ಕುಮಾರ ರಾಮನ ಸಾಂಗತ್ಯ

49. (A) ರಂ.ಶ್ರೀ. ಮುಗಳಿ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಅನಂತಮೂರ್ತಿ ಯು.ಆರ್, ಶಿವರುದ್ರಪ್ಪ ಜಿ.ಎಸ್.
(B) ಶಿವರುದ್ರಪ್ಪ ಜಿ.ಎಸ್., ರಂ. ಶ್ರೀ.ಮುಗಳಿ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಅನಂತಮಾರ್ತಿ ಯು.ಆರ್.
(C) ಮಾಸ್ತಿ ವೇಂಕಟೇಶ ಅಯ್ಯಂಗಾರ್, ರಂ. ಶ್ರೀ.ಮುಗಳಿ, ಶಿವರುದ್ರಪ್ಪ ಜಿ.ಎಸ್., ಅನಂತ ಮೂರ್ತಿ ಯು.ಆರ್.
(D) ಯು.ಆರ್. ಅನಂತಮೂರ್ತಿ, ಶಿವರುದ್ರಪ್ಪ ಜಿ.ಎಸ್., ರಂ. ಶ್ರೀ. ಮುಗಳಿ, ಮಾಸ್ತಿ ವೆಂಕಟೇಶ ಅಯ್ಯಂಗಾರ್.

50. (A) ಕವಲು, ಗರಿ, ಗ್ರಾಮೀಣ, ಶಿವದಾಸ ಗೀತಾಂಜಲಿ.
(B) ಗ್ರಾಮೀಣ, ಕವಲು, ಶಿವದಾಸ ಗೀತಾಂಜಲಿ, ಗರಿ.
(C) ಶಿವದಾಸ ಗೀತಾಂಜಲಿ, ಗ್ರಾಮೀಣ, ಕವಲು, ಗರಿ.
(D) ಗರಿ, ಶಿವದಾಸ ಗೀತಾಂಜಲಿ, ಗ್ರಾಮೀಣ, ಕವಲು.

**Space For Rough Work**